ಕಥೆ

# ರೂಹು ಶಬುದಗಳಾಚೆಗಿನ ಬೆಳಗು



**ಡಿ.ಎಸ್. ಚೌಗಲೆ**

ಕಲೆ: ವೆಂಕಟ್ರಮಣ ಭಟ್

ದೇಸಗತಿಯ ವಾಡೆಯ ದೊಡ್ಡ ದರವಾಜೆಯ ಮಹಡಿ ಮನೆ. ತಲೆಮಾರುಗಳಿಗೆ ಸಾಕ್ಷಿಯಾಗಿ ತಣ್ಣಗೆ ಬಿದ್ದುಕೊಂಡ ಹಳೆ ಕಾಲದ ಕಪ್ಪು ಬಣ್ಣದ ಹಲಗೆ, ತೊಲೆಗಳ ಛಾವಣಿ. ಪಕ್ಕದಲ್ಲಿ ಮೇಲೆ ಹಾದು ಹೋದ ಜಿನ್ನೆ. ಪಡಸಾಲೆಯಲ್ಲಿ ಹಾಸಿದ ಬಿಳಿ ಹೊದಿಕೆಯ ಗಾದಿ. ಆನಿಸಿ ಕೂರಲು ಅದೇ ಅರೆ ಶುಭ್ರ ತೆಕ್ಕೆಗಳು. ಎದುರಿಗೆ ತನ್ನ ಪಾಡಿಗೆ ಬಿದ್ದುಕೊಂಡಿತ್ತು ಎಲೆ ಅಡಿಕೆಯ ಪಾನಡಬ್ಬಿ. ಹಿತ್ತಾಳೆಯ ಅಂಟಿಕ್ ಪೀಸ್! ದೊಡ್ಡಸ್ಕ್ರೀನ್‌ನ ಟೀವಿ.

ಮನೆ ಯಜಮಾನ ಗುರುಲಿಂಗ ದೇಸಾಯಿ ಸಂಗಡ ಹಬ್ಬಕ್ಕೆ ಆಗಮಿಸಿದ್ದ ಸಮಾಜಶಾಸ್ತ್ರ ಪ್ರೊಫೆಸರ್ ಬಸವರಾಜ ಕುಳಿತಿದ್ದರು. ಬಸವರಾಜ ಆಪ್ತರಿಗೆ ಬಸೂ. ಗುರುಲಿಂಗ ಅವರು ತಮ್ಮ ಹೊಲಗಳಲ್ಲಿ ನಡೆಸಿದ ಕೃಷಿ ಸಂಬಂಧಿ ಆಧುನಿಕ ಪ್ರಯೋಗಗಳ ಬಗ್ಗೆ ಹೆಮ್ಮೆಯಿಂದ ಬಸವರಾಜ ಸಂಗಡ ಹಂಚಿಕೊಳ್ಳುತ್ತಿದ್ದರು. ಖರೆವಂದರೆ ಗುರುಲಿಂಗ ಸಾವಯವ ಕೃಷಿಯಲ್ಲಿ ತಮ್ಮ ಯಶಸ್ವಿ ಪ್ರಯೋಗಗಳಿಂದ ನಾಮಾಂಕಿತರು. ಚರ್ಚೆ ಗಹನತೆಯ ಆಳ, ಎತ್ತರವನ್ನು ತಲುಪಿತ್ತು.

ಒಮ್ಮೆಗೆ ಆಕರ್ಷಕ ವ್ಯಕ್ತಿತ್ವ ದರವಾಜೆಯಲ್ಲಿ. ಬಸೂ ಕಣ್ಣುಗಳು ಸಹಜವಾಗಿ ದರವಾಜೆಯತ್ತ ಹರಿದವು. ಒಮ್ಮೆಲೆ ಎದೆ ಧಸಕ್ಕೆಂದು ಚುಳುಕಾಡಿತು. ದರವಾಜೆಯಲ್ಲಿ ಚಕಿತಗೊಳ್ಳುವಂತೆ ನಡು ವಯಸ್ಸಿನ ಬಳುಕುವ ನಡುವಿನವಳು ಪ್ರತ್ಯಕ್ಷಳಾದಳು. ಹಾಲು ಮೈಬಣ್ಣ, ಚೆಲುವು ತುಂಬಿದ ದುಂಡು ಮುಖ, ಗಾಢ ನೀಲಿ ಸೀರೆ. ಇವು ಆಕೆಯ ಚೆಂದವನ್ನು ಇನ್ನಷ್ಟು ಸಿರಿವಂತಗೊಳಿಸಿದ್ದವು. ಬಸೂಗೆ ಎಲ್ಲೋ ನೋಡಿದಂತೆ ಭಾಸ. ಇದೊಂದು ಆಕಸ್ಮಿಕವೂ ಹೌದು. ಆಕೆ ಮೈಯೆಲ್ಲ ಚೆಲುವು ಹೊತ್ತವಳು. ಹೊಸ್ತಿಲು ಆಚೆ ಹೆಜೆಯಿಟ್ಟು ಎದುರಾದಳು. ನಲವತ್ತಕ್ಕೂ ಅಧಿಕ ಮಳೆ ಬಿಸಿಲುಗಳುಂಡವಳು. ಆಕೆ ಮುಖಚರ್ಯೆ ಬಿಸಿಲ ಝಳಕ್ಕೆ ಗುಲಾಬಿ ಪಕಳೆ ಬಾಡಿದಂತೆ ಕೊಂಚ ಬಾಡಿತ್ತು. ಬಸವರಾಜರ ಸುಪ್ತ ಒಳಗಣ್ಣು ತೆರೆಯಿತು. ಅಲ್ಲಿ ಸುಪ್ತ ಮನದಲ್ಲಿ ಅಚ್ಚೊತ್ತಿದ್ದದ್ದು ಝಗ್ಗನೆ ಚಿತ್ರರೂಪ ಪಡೆದುಕೊಂಡಿತು. ಭೂತದಲ್ಲಿ ಹದಿನಾರು ಪ್ರಾಯದ ಅರಳಿದ ಕಂಗಳ ಚೆಲುವೆ. ಈಕೆಯೇ! ಜಿಂಕೆಯಂತೆ ನೆಗೆದಾಡುವ, ಒಂದೆಡೆ ಇರಲಾರದ ಪೋರಿಯ ಎಳೆಯ ಮೊಗವು ಇಂದು ಮಾಗಿದ ಹಣ್ಣು. ಆ ಮೊಗವು ವರ್ತಮಾನದಲ್ಲೂ ಅದೇ ಮುದ್ರೆ ಮತ್ತು ಹೊಳಪಿಂದ ಜಗಮಗಿಸುತ್ತಿತ್ತು.

ಹೌದು. ಅದೇ ಆಕೆ ಚಂದದ ರೂಪಾ! ಹೌದು ರೂಪಾಳೇ ಆಕೆಯೆಂದು ಬಸವರಾಜನ ಮನಸ್ಸು ಕೂಗಿ ಕೂಗಿ ಹೇಳಿ ಖಚಿತ ಪಡಿಸಿಕೊಂಡಿತು. ಗುರುಲಿಂಗರ ಸಂಗಡದ ಮಾತುಕತೆ ನಡುವೆಯೆ, 'ನೀ ರೂಪಾ ಹೌಂದಲ್ಲ?' ಬಸೂ ಒಮ್ಮೆಗೆ ವಿಚಾರಿಸಿದರು.